ಇಲಾಖೆ / ವಿಷಯ : DEPARTMENT / SUBJECT: ಶಾಸಕಾಂಗ - ಅಧಿವೇಶನ
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ
ದಿನಾಂಕ : DATE: 14/9/2020

### ಎಲ್ಲ ವಿಷಯಗಳ ಚರ್ಚೆಗೆ ಸರ್ಕಾರ ಸಿದ್ಧವೆಂದ ಪ್ರಧಾನಿ | ಹಲವು ವಿಶೇಷಗಳು | ಪಾಳಿಯಲ್ಲಿ ಸದನಗಳ ಕಲಾಪ

# ಕರೊನಾ ಕಾಲದ ಸಂಸತ್ ಅಧಿವೇಶನ ಇಂದಿನಿಂದ

**ನವದೆಹಲಿ:** ಭಾರತ ಸಹಿತ ಜಗತ್ತನ್ನು ತಲ್ಲಣಗೊಳಿಸಿರುವ ಕರೊನಾ ವೈರಸ್ ಮಹಾಮಾರಿ ಮತ್ತು ಚೀನಾದ ಗಡಿ ಕ್ಯಾತೆಯ ನಡುವೆ ಸಂಸತ್ತಿನ ಮಳೆಗಾಲದ ಅಧಿವೇಶನ ಇಂದು (ಸೋಮವಾರ) ಆರಂಭವಾಗಲಿದೆ. ಕೋವಿಡ್-19 ನಿಯಂತ್ರಣಕ್ಕೆ ಅನುಸರಿಸಬೇಕಾದ ನಿಯಮಾವಳಿಗಳ ಕಾರಣದಿಂದ ಈ ಬಾರಿಯ ಸಂಸತ್ ಅಧಿವೇಶನ ಆಸನ ವ್ಯವಸ್ಥೆಯಲ್ಲಿ ಬದಲಾವಣೆ ಸಹಿತ ಹಲವು ವಿಶೇಷತೆಗಳ ನಡುವೆ ನಡೆಯಲಿದೆ. ಭಾರತದಲ್ಲಿ ಕರೊನಾ ಕಾಟ ಆರಂಭವಾದ ನಂತರ ನಡೆಯುತ್ತಿರುವ ಪ್ರಥಮ ಅಧಿವೇಶನ ಇದಾಗಿದೆ. ಮಾರ್ಚ್‌ನಲ್ಲಿ ಲಾಕ್‌ಡೌನ್ ಹೇರುವ ಕೆಲವೇ ದಿನಗಳ ಮುಂಚೆ ಬಜೆಟ್ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿತ್ತು. ಪ್ರಶ್ನೋತ್ತರ ಅವಧಿಯನ್ನು ರದ್ದುಪಡಿಸಿರುವುದು ಈ ಅಧಿವೇಶನದ ವಿಶೇಷ. ಕರೊನಾ, ಆರ್ಥಿಕ ಪರಿಸ್ಥಿತಿ, ಗಡಿ ತಂಟೆ ಮೊದಲಾದ ವಿಚಾರಗಳಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಸಜ್ಜಾಗಿದ್ದ ಪ್ರತಿಪಕ್ಷಗಳು, ಪ್ರಶ್ನೋತ್ತರ ಅವಧಿಯ ರದ್ದತಿಯಿಂದ ನಿರಾಸೆಗೊಂಡಿವೆ.

**ಪ್ರಧಾನಿ ಸ್ಪಷ್ಟನೆ:** ಅಧಿವೇಶನದಲ್ಲಿ ಎಲ್ಲ ವಿಷಯಗಳನ್ನು ಚರ್ಚಿಸಲು ಸರ್ಕಾರ ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ವರ್ಚುವಲ್ ಸರ್ವಪಕ್ಷ ಸಭೆಯಲ್ಲಿ ಹೇಳಿದ್ದಾರೆ. ಕಳೆದ ಅಧಿವೇಶನದಂತೆ ಮಳೆಗಾಲದ ಅಧಿವೇಶನವನ್ನು ಕೂಡ ಫಲಪ್ರದಗೊಳಿಸುವಂತೆ ರಾಜಕೀಯ ಪಕ್ಷಗಳನ್ನು ಪ್ರಧಾನಿ ಕೋರಿದರೆಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಷಿ ತಿಳಿಸಿದರು. ಕಾಂಗ್ರೆಸ್ ನಾಯಕರಾದ ಗುಲಾಂ ನಬಿ ಆಜಾದ್, ಅಧೀರ್ ರಂಜನ್ ಚೌಧರಿ ಮೊದಲಾದವರು ಸಭೆಯಲ್ಲಿದ್ದರು.

## ಐವರು ಸಂಸದರಿಗೆ ಕರೊನಾ

**ಲೋ**ಕಸಭೆಯ ಐವರು ಸದಸ್ಯರಿಗೆ ಕರೊನಾ ಸೋಂಕು ದೃಢವಾಗಿದೆ. ಇಂದಿನಿಂದ ಮುಂಗಾರು ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ರಾಜ್ಯಸಭೆ ಮತ್ತು ಲೋಕಸಭೆಯ ಸದಸ್ಯರಿಗೆ ಕಡ್ಡಾಯವಾಗಿ ಕರೊನಾ ಪರೀಕ್ಷೆ ಮಾಡಿಸುವಂತೆ ತಿಳಿಸಲಾಗಿದೆ.

ಸಂಸತ್ತಿನಲ್ಲಿ ನಮ್ಮ ಧ್ವನಿ ಕೇಳಬೇಕಿದೆ – ಕಾಂಗ್ರೆಸ್ ನಾಯಕ



**ಪ್ರತಿಪಕ್ಷ ಬೇಡಿಕೆ**

ಆರ್ಥಿಕತೆ ಹಿಂಜರಿಕೆ, ಗಡಿ ತಕರಾರು, ನಿರುದ್ಯೋಗ ಸಮಸ್ಯೆ ಮತ್ತು ಕೃಷಿ ಬಿಕ್ಕಟ್ಟಿನ ಕುರಿತು ಲೋಕಸಭೆಯಲ್ಲಿ ಚರ್ಚೆಯಾಗಬೇಕೆಂದು ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ಪ್ರತಿಪಕ್ಷಗಳು ಒತ್ತಾಯಿಸಿವೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ●ನಾಯ್ಡು ಸಭೆ: ರಾಜ್ಯಸಭೆಯ ಸಭಾಪತಿ ಎಂ.ವೆಂಕಯ್ಯ ನಾಯ್ಡು ಕೂಡ ಭಾನುವಾರ ಮೇಲ್ಮನೆಯ ಹಲವು ಪಕ್ಷಗಳ ನಾಯಕರೊಂದಿಗೆ ಸಭೆ ನಡೆಸಿದರು. ●ಎನ್‌ಡಿಎ ಸಭೆ: ಸಂಸತ್ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಎನ್‌ಡಿಎ ಕೂಟದ ಸಭೆಯೂ ನಡೆಯಿತು. ಚೀನಾ ಕುರಿತು ಹೇಳಿಕೆ: ಭಾರತ-ಚೀನಾ ಗಡಿ ಬಿಕ್ಕಟ್ಟಿನ ಕುರಿತು ಸರ್ಕಾರ ಸಂಸತ್ ಅಧಿವೇಶನದಲ್ಲಿ ಹೇಳಿಕೆ ನೀಡುವ ಸಾಧ್ಯತೆಯಿದೆ. ಭಾನುವಾರ ನಡೆದ ಸಂಸತ್ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ವಿಷಯ ಚರ್ಚಿತವಾಯಿತು.

## ಕೋವಿಡ್ ಪರೀಕ್ಷೆ

●ಸಂಸತ್ ಅಧಿವೇಶನದ ವೇಳೆ ಕೋವಿಡ್-19 ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ●ಎಲ್ಲ ಸಂಸದರು ಮತ್ತು ಸಿಬ್ಬಂದಿ ಸಂಸತ್ ಭವನಕ್ಕೆ ಆಗಮಿಸುವುದಕ್ಕೂ ಮುನ್ನ ಕರೊನಾ ವೈರಸ್ ಪರೀಕ್ಷೆಗೆ ಒಳಪಡುವುದು ಕಡ್ಡಾಯ. ಪೂರ್ವಭಾವಿಯಾಗಿ 4000ಕ್ಕೂ ಹೆಚ್ಚು ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ●ಡಿಜಿಟಲ್ ಹಾಜರಾತಿ ಅಪ್ಲಿಕೇಶನ್ ಅನ್ನು ಜಾರಿ ಮಾಡಲಾಗಿದೆ. ●ಇಡೀ ಸಂಸತ್ ಭವನ ಆವರಣವನ್ನು ಸ್ಯಾನಿಟೈಸ್ ಮಾಡಲಾಗಿದೆ. ●ಸಂಸತ್ ಭವನದ ಎಲ್ಲ ಬಾಗಿಲುಗಳಿಗೆ ಸ್ಪರ್ಶ-ರಹಿತ (ಟಚ್-ಫ್ರೀ) ವ್ಯವಸ್ಥೆ ಅಳವಡಿಸಲಾಗಿದೆ. ●ಬೃಹತ್ ಪ್ರದರ್ಶನ ಪರದೆಗಳನ್ನೂ ಇದೇ ಮೊದಲ ಬಾರಿಗೆ ಅಳವಡಿಸಲಾಗಿದೆ.

## ಪಾಳಿ ವ್ಯವಸ್ಥೆ

- ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಂಸತ್ತಿನ ಅಧಿವೇಶನ ಪಾಳಿಯಲ್ಲಿ ನಡೆಯಲಿದೆ. ಕರೊನಾ ಕಾರಣ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಇದರ ಉದ್ದೇಶ.
- ಲೋಕಸಭೆ ಕಲಾಪ ಮೊದಲ ದಿನ, ಅಂದರೆ ಸೆಪ್ಟೆಂಬರ್ 14ರಂದು ಮಾತ್ರ ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯಲಿದೆ.
- ನಂತರ, ಅಧಿವೇಶನ ಕೊನೆಗೊಳ್ಳುವ ಅಕ್ಟೋಬರ್ 1ರವರೆಗೆ ಮಧ್ಯಾಹ್ನ 3ರಿಂದ ಸಂಜೆ 7 ಗಂಟೆವರೆಗೆ ಸದನದ ಕಲಾಪ.
- ರಾಜ್ಯಸಭೆ ಕಲಾಪ ಮೊದಲ ದಿನ ಮಧ್ಯಾಹ್ನ 3ರಿಂದ ಸಂಜೆ 7ರವರೆಗೆ. ಉಳಿದ ದಿನಗಳಲ್ಲಿ ಬೆಳಗ್ಗೆ ಒಂಬತ್ತರಿಂದ ಮಧ್ಯಾಹ್ನ ಒಂದರವರೆಗೆ ಕಲಾಪ ನಡೆಯುತ್ತದೆ.
- ರಜೆಯಿಲ್ಲ: ವಾರಾಂತ್ಯ ರಜೆಯೂ ಇಲ್ಲದೆ ಈ ಬಾರಿಯ ಸಂಸತ್ ಕಲಾಪ ನಿಗದಿಪಡಿಸಲಾಗಿದೆ. ●ಒಟ್ಟು 18 ಬೈಠಕ್‌ಗಳು (ಸಿಟಿಂಗ್) ನಡೆಯಲಿವೆ.

## ಗ್ಯಾಲರಿಗಳ ಬಳಕೆ

ದೈಹಿಕ ಅಂತರ ನಿಯಮ ಕಾಪಾಡುವ ಉದ್ದೇಶದಿಂದ ಸಂಸದರು ಕುಳಿತುಕೊಳ್ಳಲು ಲೋಕಸಭೆ, ರಾಜ್ಯಸಭೆಗಳ ಚೇಂಬರ್, ಗ್ಯಾಲರಿಗಳನ್ನೂ ಬಳಸಲು ಯೋಜಿಸಲಾಗಿದೆ. 1952ರ ನಂತರ ಭಾರತೀಯ ಸಂಸತ್ತಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಂಥ ಕ್ರಮ ಅನುಸರಿಸಲಾಗುತ್ತಿದೆ.

## 23 ಮಸೂದೆ ಮಂಡನೆ

**ನವದೆಹಲಿ:** ಸೋಮವಾರ ಆರಂಭವಾಗಲಿರುವ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ 23 ಹೊಸ ಮಸೂದೆಗಳನ್ನು ಮಂಡಿಸಲು ಸರ್ಕಾರ ಸಜ್ಜಾಗಿದೆ. ಅವುಗಳಲ್ಲಿ 11 ಮಸೂದೆಗಳು ಸುಗ್ರೀವಾಜ್ಞೆಯ ಬದಲಿಗೆ ಬರಲಿವೆ.

ವೈದ್ಯರ ಸಹಿತ ಆರೋಗ್ಯ ಕ್ಷೇತ್ರದ ಸಿಬ್ಬಂದಿ ಮೇಲೆ ನಡೆಯುವ ಹಲ್ಲೆಗಳನ್ನು ತಡೆಯುವ ಮಸೂದೆ



ಅಂಗೀಕಾರವಾಗಿ ಕಾನೂನಾದಾಗ, ಕೋವಿಡ್-19 ನಿಭಾಯಿಸಲು ನಿಯೋಜಿತರಾದ ಆರೋಗ್ಯ ಸಿಬ್ಬಂದಿ ಮೇಲೆ ನಡೆಸುವ ಹಲ್ಲೆ ಅಥವಾ ಕಿರುಕುಳ ಜಾಮೀನುರಹಿತ ಅಪರಾಧವಾಗಲಿದೆ. ಅಪರಾಧಿಗಳಿಗೆ ಏಳು ವರ್ಷವರೆಗೆ ಸೆರೆವಾಸ ಮತ್ತು ಐದು ಲಕ್ಷ ರೂ. ವರೆಗೆ ದಂಡ ವಿಧಿಸಲು ಅವಕಾಶವಿದೆ. ವೈದ್ಯರು, ನರ್ಸ್‌ಗಳು ಮತ್ತು ಆಶಾ ಕಾರ್ಯಕರ್ತೆಯರಿಗೂ ಅದು ರಕ್ಷಣೆ ಕಲ್ಪಿಸಲಿದೆ.

**ಸಂಸದರ ವೇತನ ಕಡಿತ:** 2020 ಏಪ್ರಿಲ್‌ನಿಂದ ಒಂದು ವರ್ಷದ ವರೆಗೆ ಸಂಸತ್ ಸದಸ್ಯರ ವೇತನದಲ್ಲಿ ಶೇಕಡ 30 ಕಡಿತ ಮಾಡುವುದಕ್ಕೆ ಸಂಬಂಧಿಸಿದ ಸುಗ್ರೀವಾಜ್ಞೆ ಸ್ಥಾನದಲ್ಲಿ ಮಸೂದೆ ಮಂಡನೆಯಾಗಲಿದೆ. ಈ ಹಣವನ್ನು ಕರೊನಾ ವೈರಸ್ ವಿರುದ್ಧದ ಹೋರಾಟದಲ್ಲಿ ಬಳಸಲಾಗುತ್ತದೆ.

## ಪ್ರಮುಖ ಮಸೂದೆಗಳು

●ರೈತರ ಉತ್ಪನ್ನಗಳ ಖರೀದಿ ಮತ್ತು ಮಾರಾಟದಲ್ಲಿ ರೈತರು ಹಾಗು ವರ್ತಕರಿಗೆ ಸ್ವಾತಂತ್ರ್ಯ ಕಲ್ಪಿಸುವ ರೈತರ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ ಮಸೂದೆ. ●ಜಮ್ಮು ಮತ್ತು ಕಾಶ್ಮೀರ ಅಧಿಕೃತ ಭಾಷಾ ಮಸೂದೆ. ಈಗಿರುವ ಉರ್ದು ಮತ್ತು ಇಂಗ್ಲಿಷ್ ಜೊತೆಯಲ್ಲಿ ಕಾಶ್ಮೀರಿ, ಡೋಗ್ರಿ ಮತ್ತು ಹಿಂದಿ ಕೂಡ ಕೇಂದ್ರಾಡಳಿತ ಪ್ರದೇಶದ ಅಧಿಕೃತ ಭಾಷೆಗಳಾಗಲಿವೆ. ●ಬಹು ರಾಜ್ಯ ಸಹಕಾರಿ ಸಂಘಗಳ ಮಸೂದೆ.